ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಸಿ5(1)ದ್ವಿದಸ/ಜ್ಯೇಪ/04/2019–20 ದಿನಾಂಕ: 13–11–2019

## ಅಧಿಸೂಚನೆ

ವಿಷಯ :– ಸಾರ್ವಜನಿಕ ಶಿಕ್ಷಣ ಇಲಾಖೆಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ರಾಜ್ಯಮಟ್ಟದ ಸ್ಥಳೀಯ ವೃಂದದ ದ್ವಿತೀಯ ದರ್ಜೆ ಸಹಾಯಕರ ವೃಂದದ ನೌಕರರ ಅಂತಿಮ ಜ್ಯೆಷ್ಠತಾ ಪಟ್ಟಿಯನ್ನು ದಿನಾಂಕ: 01/01/2019ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ :– ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ: 27/02/2019.

2 :– ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ: 15/05/2019.

3 :– ಈ ಕಛೇರಿ ಸಮ ಸಂಖ್ಯೆ ಅಧಿಸೂಚನೆ ದಿನಾಂಕ: 10/10/2019

****

1. ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ವಿಸ್ತರಿಸುವ 2017ರ ಅಧಿನಿಯಮವನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಮೇಲೆ (1)ರಲ್ಲಿ ಓದಲಾದ ದಿನಾಂಕ : 27/02/2019ರ ಆದೇಶದಲ್ಲಿ ಒಳಗೊಂಡಿರುವ ಸೂಚನೆಗಳನ್ವಯ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳು ಕ್ರಮತೆಗೆದುಕೊಳ್ಳತಕ್ಕದ್ದು ಎಂದು ಉಲ್ಲೇಖ (2)ರಲ್ಲಿ ಆದೇಶವಿರುತ್ತದೆ.

2. ಮೇಲೆ (1)ರಲ್ಲಿ ಓದಲಾದ ದಿನಾಂಕ : 27/02/2019ರ ಸರ್ಕಾರಿ ಆದೇಶದ ಕಂಡಿಕೆ 8ರ ಉಪಕಂಡಿಕೆ (1) ರನ್ವಯ ಕ್ರಮ ತೆಗೆದುಕೊಂಡ ನಂತರ, ಸದರಿ ಆದೇಶದ ಕಂಡಿಕೆ 8ರ ಉಪಕಂಡಿಕೆ (2) ರಲ್ಲಿ ಉಲ್ಲೇಖಿಸಲಾದ ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4, 5 ಮತ್ತು 6ನ್ನು ಸೆಕ್ಷನ್ 9ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ/ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಸಿದ್ದಪಡಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗಧಿ ಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗಧಿ ಪಡಿಸುವುದನ್ನು ಒಳಗೊಂಡ ಪ್ರಕ್ರಿಯೆನ್ನು ಪೂರ್ಣಗೊಳಿಸತಕ್ಕದ್ದು ಎಂದು ಉಲ್ಲೇಖ (2)ರಲ್ಲಿ ಸರ್ಕಾರದ ಆದೇಶವಿರುತ್ತದೆ.

3. ಉಲ್ಲೇಖ (1)ರ ಕಂಡಿಕೆ (8)ರ ಉಪಕಂಡಿಕೆ (2)ರಲ್ಲಿ ಈ ಮುಂದಿನಂತೆ ವಿವರಿಸಲಾಗಿದೆ. – ಮುಂಬಡ್ತಿಯಲ್ಲಿ ಮೀಸಲಾತಿಯ ಪ್ರಸ್ತುತ ನೀತಿಯ ಪ್ರಕಾರ ಮುಂಬಡ್ತಿ ನೀಡಲಾದ ಎಲ್ಲಾ ವೃಂದಗಳ ಮತ್ತು ಆ ವೃಂದಗಳಿಗಿಂತ ಎಲ್ಲಾ ಉನ್ನತ ವೃಂದಗಳ ಜ್ಯೇಷ್ಠತಾ ಪಟ್ಟಿಗಳನ್ನು ದಿನಾಂಕ: 27/04/1978 ರಿಂದ ಜಾರಿಗೆ ಬರುವಂತೆ ಪುನರಾವಲೋಕಿಸತಕ್ಕದ್ದು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಸರ್ಕಾರಿ ನೌಕರರ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದವರ ಅಂತರ ಜ್ಯೇಷ್ಠತೆಯನ್ನು(inter-se seniority), 2017ರ ಅಧಿನಿಯಮದ ಪ್ರಕರಣ 3 ಮತ್ತು 4ನ್ನು, ಅದರ ಪ್ರಕರಣ 5 ರೊಂದಿಗೆ ಸಹವಾಚನ ಮಾಡಿಕೊಂಡಂತೆ, ಇವುಗಳನ್ವಯ ನಿರ್ಧರಿಸತಕ್ಕದ್ದು ಎಂದಿರುತ್ತದೆ.

4. **ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಅಧಿನಿಯಮದ ಪ್ರಕರಣ 3, 4 ಮತ್ತು 5ರ ವಿವರ ಕೆಳಕಂಡಂತಿರುತ್ತದೆ.**

- **ಪ್ರಕರಣ 3ರಲ್ಲಿ ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧರಣೆ :-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿನ ಮೀಸಲಾತಿ ನೀತಿಗನುಸಾರವಾಗಿ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರು ತತ್ಪರಿಣಾಮದ ಜ್ಯೇಷ್ಠತೆಗೆ ಹಕ್ಕುಳ್ಳವರಾಗಿರತಕ್ಕದ್ದು. ಜ್ಯೇಷ್ಠತೆಯನ್ನು ಒಂದು ವೃಂದದಲ್ಲಿ ಸಲ್ಲಿಸಿದ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸತಕ್ಕದ್ದು ಎಂದಿರುತ್ತದೆ.

- **ಪ್ರಕರಣ 4ರಲ್ಲಿ 1978ರ ಏಪ್ರಿಲ್ 27ರ ತರುವಾಯದಿಂದ ಈಗಾಗಲೇ ನೀಡಲಾಗಿರುವ ತತ್ಪರಿಣಾಮ ಜ್ಯೇಷ್ಠತೆಯ ಸಂರಕ್ಷಣೆ** :- ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿ ಮೀಸಲಾತಿ ಆದೇಶದ ನೀತಿಗೆ ಅನುಸಾರವಾಗಿ ಸಾವಿರದ ಒಂಭೈನೂರ ಎಪ್ಪತ್ತೆಂಟರ ಏಪ್ರಿಲ್ ಇಪ್ಪತ್ತೇಳನೇ ದಿನಾಂಕದಿಂದ ಜಾರಿಗೆ ಬರುವಂತೆ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಈಗಾಗಲೇ ನೀಡಲಾಗಿರುವ ತತ್ಪರಿಣಾಮದ ಜ್ಯೇಷ್ಠತೆಯು ಸಿಂಧುವಾಗಿರತಕ್ಕದ್ದು ಮತ್ತು ಅದನ್ನು ಸಂರಕ್ಷಿಸತಕ್ಕದ್ದು ಹಾಗೂ ಅದನ್ನು ಭಂಗಗೊಳಿಸತಕ್ಕದ್ದಲ್ಲ ಎಂದಿರುತ್ತದೆ.

- **ಪ್ರಕರಣ 5ರಲ್ಲಿ ಪುನರ್ ಅವಲೋಕನಕ್ಕಾಗಿ ಅವಕಾಶ** :- ರಾಜ್ಯ ಸಿವಿಲ್ ಸೇವೆಗಳಿಗೆ ಸೇರಿದ ಹುದ್ದೆಗಳಿಗೆ ಇರುವ ಎಲ್ಲಾ ಬಡ್ತಿಗಳು ಮೀಸಲಾತಿ ಆದೇಶಗಳ ಉಪಬಂಧಗಳ ವ್ಯಾಪ್ತಿಯೊಳಗೆ ಮತ್ತು ನೇಮಕಾತಿ ವಿಧಾನಕ್ಕೆ ಹಾಗೂ ಜ್ಯೇಷ್ಠತೆಗೆ ಸಂಬಂಧಿಸಿದ ಇತರ ನಿಯಮಗಳಿಗೆ ಅನುಸಾರವಾಗಿ ಇರತಕ್ಕದ್ದು. ನೇಮಕಾತಿ ಪ್ರಾಧಿಕಾರವು ಬಡ್ತಿಗಳು ಕ್ರಮಾನುಸಾರವಾಗಿ ಮಾಡಲಾಗಿರುವುದನ್ನು ಖಚಿತಪಡಿಸಿಕೊಳ್ಳಲು ಅಸ್ತಿತ್ವದಲ್ಲಿರುವ ಜ್ಯೇಷ್ಠತಾ ಪಟ್ಟಿಗಳನ್ನು ಪುರಾವಲೋಕಿಸತಕ್ಕದ್ದು ಮತ್ತು ಪುನರ್‌ರಚಿಸತಕ್ಕದ್ದು.

5. ಮೇಲ್ಕಂಡ ಅಂಶಗಳು ಹಾಗೂ ಉಲ್ಲೇಖ (1) ಮತ್ತು (2)ರ ಸರ್ಕಾರದ ಆದೇಶಗಳು ಮತ್ತು ಕರ್ನಾಟಕ ಸರ್ಕಾರಿ ನೌಕರರ (ಜ್ಯೆಷ್ಠತಾ ನಿಯಮಗಳು), 1957ರ ನಿಯಮಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಹೈದ್ರಾಬಾದ್ ಕರ್ನಾಟಕ ಪ್ರದೇಶದ ರಾಜ್ಯಮಟ್ಟದ ಸ್ಥಳೀಯ ವೃಂದದ ದ್ವಿತೀಯ ದರ್ಜೆ ಸಹಾಯಕರ ವೃಂದದ ನೌಕರರ ತಾತ್ಕಾಲಿಕ ಜ್ಯೆಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ.

6. ಈ ಹಿಂದೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ದ್ವಿತೀಯ ದರ್ಜೆ ಸಹಾಯಕರ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ : 01/01/2016 ರಲ್ಲಿದ್ದಂತೆ ಈ ಕಛೇರಿ ಅಧಿಸೂಚನೆ ಸಂಖ್ಯೆ: ಸಿ5(9)ದ್ವಿ.ದ.ಸ.ಜ್ಯೆಷ್ಠತೆ/37/2015-16 ದಿನಾಂಕ: 11/03/2016ರಲ್ಲಿ ಪ್ರಕಟಿಸಲಾಗಿರುತ್ತದೆ.

7. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಪೀಲು ಸಂಖ್ಯೆ : 2368/2011 – ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ : 09/02/2017 ರಂದು ನೀಡಿರುವ ತೀರ್ಪಿನನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 182 ಎಸ್‌ಆರ್‌ಆರ್ 2011, ದಿನಾಂಕ : 06/05/2017ರನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯ ದ್ವಿತೀಯ ದರ್ಜೆ ಸಹಾಯಕರ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ: 01/01/2016 ರಲ್ಲಿದ್ದಂತೆ ಈ ಕಛೇರಿಯ ಸಂಖ್ಯೆ: ಸಿ5(1)ಪ್ರ.ದ.ಸ. ಬಡ್ತಿ/57/ 2016-17 ದಿನಾಂಕ: 29/11/2017 ರಲ್ಲಿ ಪರಿಷ್ಕರಿಸಿ ಪ್ರಕಟಿಸಲಾಗಿರುತ್ತದೆ.

8. ಮೇಲ್ಕಂಡ ಅಂಶಗಳು ಹಾಗೂ ಉಲ್ಲೇಖ (1) ಮತ್ತು (2)ರ ಸರ್ಕಾರದ ಆದೇಶಗಳು ಮತ್ತು ಕರ್ನಾಟಕ ಸರ್ಕಾರಿ ನೌಕರರ (ಜ್ಯೆಷ್ಠತಾ ನಿಯಮಗಳು, 1957ರ ನಿಯಮಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಹೈದ್ರಾಬಾದ್

ಕರ್ನಾಟಕ ಪ್ರದೇಶದ ರಾಜ್ಯಮಟ್ಟದ ಸ್ಥಳೀಯ ವೃಂದದ ದ್ವಿತೀಯ ದರ್ಜೆ ಸಹಾಯಕರ ವೃಂದದ ನೌಕರರ ತಾತ್ಕಾಲಿಕ ಜ್ಯೆಷ್ಠತಾ ಪಟ್ಟಿಯನ್ನು ದಿನಾಂಕ : 01/01/2019 ರಲ್ಲಿದ್ದಂತೆ ಅನುಬಂಧ–1ರಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ನೌಕರರ ತಾತ್ಕಾಲಿಕ ಜ್ಯೆಷ್ಠತಾ ಪಟ್ಟಿಯನ್ನು ಉಲ್ಲೇಖ 3 ರಂತೆ **ಇಲಾಖೆಯ ಅಂತರ್ಜಾಲ www.schooleducation.kar.nic.in ರಲ್ಲಿ ಪ್ರಕಟಿಸಲಾಗಿತ್ತು.**

9. ಈ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯಿಂದ ಬಾಧಿತರಾಗುವಂತಹ ನೌಕರರು ತಮ್ಮ ಆಕ್ಷೇಪಣೆ/ಸಲಹೆಗಳನ್ನು ಸಮರ್ಥಿಸುವಂತಹ ದಾಖಲೆಗಳೊಂದಿಗೆ ವಿವರಗಳನ್ನು ಈ ಅಧಿಸೂಚನೆ ಹೊರಡಿಸಿದ 7 ದಿನಗಳ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದ್ದು ಬಂದಂತಹ ಆಕ್ಷೇಪಣೆಯನ್ನು ಪರಿಶೀಲಿಸಿ ಕ್ರಮವಹಿಸಲಾಗಿರುತ್ತದೆ.

10. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ: 01/01/2019 ರಲ್ಲಿದ್ದಂತೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯ ನೌಕರರ ಅಂತಿಮ ಜ್ಯೆಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

(ಮಾನ್ಯ ಆಯುಕ್ತರಿಂದ ಅನುಮೋದಿಸ್ಪಟ್ಟಿದೆ)

(ಅರುಳ್ ಕುಮಾರ್)
ಜಂಟಿ ನಿರ್ದೇಶಕರು (ಆಡಳಿತ)

ಇವರಿಗೆ:

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.
02. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು ಮುಂದಿನ ಕ್ರಮಕ್ಕಾಗಿ.
03. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರಿಗೆ ಮುಂದಿನ ಕ್ರಮಕ್ಕಾಗಿ.
04. ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಮುಂದಿನ ಕ್ರಮಕ್ಕಾಗಿ.
05. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಮುಂದಿನ ಕ್ರಮಕ್ಕಾಗಿ.
06. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಅಭಿವೃದ್ಧಿ) ಮುಂದಿನ ಕ್ರಮಕ್ಕಾಗಿ.
07. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ [ಸಂಬಂಧಿಸಿದ ಉಪನಿರ್ದೇಶಕರ ಮುಖಾಂತರ] ಮುಂದಿನ ಕ್ರಮಕ್ಕಾಗಿ.
08. ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಗೆ ಮುಂದಿನ ಕ್ರಮಕ್ಕಾಗಿ
09. ಕಛೇರಿ ಪ್ರತಿ.

**ಈ ಅಂತಿಮ ಜ್ಯೆಷ್ಠತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ www.schooleducation.kar.nic.in ರಲ್ಲಿ ಪ್ರಕಟಿಸಲಾಗಿದೆ.**

| ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಹೈದ್ರಾಬಾದ್-ಕರ್ನಾಟಕ ರಾಜ್ಯ ಮಟ್ಟದ ಸ್ಥಳೀಯ ವೃಂದಕ್ಕೆ ಅಭಿಮತ ನೀಡಿರುವ ದ್ವಿತೀಯ ದರ್ಜೆ ಸಹಾಯಕರ ಅಂತಿಮ ಜೇಷ್ಠತಾ ಪಟ್ಟಿ. [ದಿನಾಂಕ:01.01.2019ರಲ್ಲಿದಂತೆ] | | | | | | | | | |
|---|---|---|---|---|---|---|---|---|---|
| ಜೇಷ್ಠತಾ ಸಂಖ್ಯೆ | ನೌಕರರ ಹೆಸರು ಶ್ರೀ/ಶ್ರೀಮತಿ. | ಕಾರ್ಯನಿರ್ವಹಿಸುತ್ತಿರುವ ಶಾಲಾ/ಕಛೇರಿ ಪೂರ್ಣ ವಿಳಾಸ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರವರ್ಗ (ಎಸ್.ಸಿ., ಎಸ್.ಟಿ., ಜಿ.ಎಂ.) | ನೇಮಕಾತಿ ಆದಾಗಿನ ಹುದ್ದೆ (ದ್ವಿ.ದ.ಸ., ಗ್ರೂಪ್ ಡಿ ಮತ್ತು ಇತರೆ) | ಪ್ರಸ್ತುತ ಹುದ್ದೆಗೆ ಹಾಜರಾದ ದಿನಾಂಕ [ದ್ವಿ.ದ.ಸ ಹುದ್ದೆಗೆ] | ನೇಮಕಾತಿ ವಿಧಾನ (ಕೆ.ಪಿ.ಎಸ್.ಸಿ ಅನುಕಂಪ, ಬಡ್ತಿ) | ಷರಾ |
| 1 | 2 | 3 | 4 | 5 | 6 | 7 | 8 | 9 | 10 |
| 1 | ಹೆಚ್.ಎಂ.ವೀರಯ್ಯ | ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ವಲಯ-4 ಬೆಂಗಳೂರು | 01-06-1971 | 26-03-1997 | OTH | SDA | 26-03-1997 | COMP | ಹೈ.ಕ.ರಾಜ್ಯಮಟ್ಟದ ಸ್ಥಳೀಯ ಅಭ್ಯರ್ಥಿ |
| 2 | ಭೀಮರಾಯ | ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | 08-10-1969 | 06-06-1997 | OTH | SDA | 24-01-2007 | Cadre change | ಹೈ.ಕ.ರಾಜ್ಯಮಟ್ಟದ ಸ್ಥಳೀಯ ಅಭ್ಯರ್ಥಿ |
| 3 | ಬಿ.ಶಶಿಕಲ | ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | 31-05-1968 | 18-12-1996 | OTH | Teacher | 06-10-2010 | Cadre change | ಹೈ.ಕ.ರಾಜ್ಯಮಟ್ಟದ ಸ್ಥಳೀಯ ಅಭ್ಯರ್ಥಿ |

(ಮಾನ್ಯ ಆಯುಕ್ತರಿಂದ ಅನುಮೋದಿಸ್ಪಟ್ಟಿದೆ)

(ಅರುಳ್ ಕುಮಾರ್)
ಜಂಟಿ ನಿರ್ದೇಶಕರು (ಆಡಳಿತ)